ವ್ಯಾಸಂಗ ಮಾಡಲು ಹೋಗಿರುವ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆ. ಆದ್ದರಿಂದ ಈ ಸಮಸ್ಯೆಯನ್ನು ಬಹಳ ಸೂಕ್ಷ್ಮವಾಗಿ ಪರಿಹರಿಸಬೇಕಾಗುತ್ತದೆ. ಈ ಸಲದ ಆಯ್ಕೆ ನಿಧಾನವಾದ ಕಾರಣ ನಾವು ಹೆಚ್ಚು ಜಾಗಗಳನ್ನು ತುಂಬಿಕೊಂಡಿದ್ದೇವೆಂದು ಅವರು ಹೇಳಿದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಒಂದು ಆದೇಶವನ್ನು ಈ ಬಗ್ಗೆ ಕೊಟ್ಟಿದ್ದಾರೆ. ಏನೆಂದರೆ. ಈ ವರ್ಷದ ಕೊರತೆಯನ್ನು ಮುಂದಿನ ವರ್ಷ ಭರ್ತಿ ಮಾಡಲಾಗುವುದು ಎಂದು. ಈ ಆದೇಶವನ್ನು ಅವರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ವಿಚಾರದಲ್ಲಿ ತೀರ್ಮಾನ ಕೈಕೊಳ್ಳುವುದನ್ನು ಸರ್ಕಾರದ ಕಡೆಯಿಂದ ನಿಧಾನ ಮಾಡಿದ್ದರಿಂದ ಅವರು ಅವರ ಕೋಟಾವನ್ನು ಭರ್ತಿ ಮಾಡಿಕೊಂಡರು. ನಂತರ ಸರ್ಕಾರದ ಸೀಟ್‌ಗಳನ್ನು ಜಾಸ್ತಿ ಮಾಡಿದ್ದಾರೆಂದು ಹೇಳಿ ತಮ್ಮ ಭಾಗದ ಸೀಟ್‌ಗಳನ್ನು ಸಹ ಜಾಸ್ತಿ ಮಾಡಬೇಕೆಂದು ಅವರು ಆಸಂವಂತಿ ಕೇಳಿರುವುದು ನಿಜವೇ ? ಇದಕ್ಕೆ ಅನುಮತಿ ಕೊಟ್ಟರೆ ಅವರು ಡೊನೇಷನ್ ಮೂಲಕ ಹೆಚ್ಚು ಲಾಭ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತೆ ಆಗುವುದಿಲ್ಲವೇ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಇದು ನಿಧಾನವಾಗಲು ಕಾರಣವೇನು ಎಂಬುದು ತಮಗೂ ಗೊತ್ತಿದೆ. ವೆಂಕಟಸ್ವಾಮಿ ಆಯೋಗದ ವರದಿ ಬಗ್ಗೆ ಚಳುವಳಿ ನಡೆದಿದ್ದರಿಂದ ಆಯ್ಕೆ ಮಾಡುವುದರಲ್ಲಿ ನಿಧಾನವಾಯಿತು. ಈ ಚಳುವಳಿಯ ಹಿನ್ನೆಲೆಯಲ್ಲಿ ಮೊದಲಿದ್ದ ನಿಯಮಗಳನ್ನು ಬದಲಾವಣೆ ಮಾಡಬೇಕಾಯಿತು. ರೋಸ್ಟರ್ ಸಿಸ್ಟಮ್ ಬದಲಾವಣೆಯಾಯಿತು. ನಂತರ ಅರ್ಜಿಗಳನ್ನು ಕರೆದು ಸಂದರ್ಶನ ಮಾಡಲು ಸ್ವಲ್ಪ ಕಾಲ ಬೇಕಾಯಿತು. ಇದರಿಂದ ನಿಧಾನವಾಯಿತು.

ಶ್ರೀ ಎಸ್. ಎಸ್. ಕಡಪಟ್ಟಿ.—ಖಾಸಗೀ ವೈದ್ಯಕೀಯ ಕಾಲೇಜುಗಳವರಿಗೆ ಸರ್ಕಾರದ ಸೌಲಭ್ಯಗಳನ್ನು ಕೊಡಬಾರದೆಂದು ನಾನು ಹೇಳುವುದಿಲ್ಲ. ಸರ್ಕಾರದ ನಿಲುವನ್ನು ವ್ಯಕ್ತಪಡಿಸುವುದು ನಿಧಾನವಾದ ಕಾರಣ ಇಷ್ಟೆಲ್ಲಾ ಆಯಿತು. ಇನ್ನು ಮುಂದೆಯಾದರೂ ಕಾಲೇಜುಗಳು ಪ್ರಾರಂಭವಾಗುವುದಕ್ಕೆ ಮೊದಲೇ ಒಂದು ಅಂತಿಮ ನಿರ್ಧಾರವನ್ನು ಕೈಗೊಳ್ಳಬೇಕು ಇಲ್ಲದಿದ್ದರೆ ಸರ್ಕಾರದ ಮೆಡಿಕಲ್ ಕಾಲೇಜುಗಳನ್ನು ಬಿಟ್ಟು ಇನ್ನುಳಿದ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಅವರಿಗೇ ಕೊಟ್ಟಿದ್ದೇವೆಂದು ಹೇಳಿಬಿಡಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಸೇಂಟ್‌ಜಾನ್ ಮೆಡಿಕಲ್ ಕಾಲೇಜು ಒಂದು ಸ್ವಯತ್ತ ಸಂಸ್ಥೆ ಆಗಿದೆ. ಅಲ್ಲಿ ಸ್ನಾತಕೋತ್ತರ ಪದವೀಧರರು ಏನು ವ್ಯಾಸಂಗ ಮಾಡುತ್ತಿದ್ದಾರೆ. ಆವರೆಗೆ ಫ್ಯಾಸಿಲಿಟೀಸ್‌ನ್ನು ನಾವು ಕಲ್ಪಿಸಿಕೊಟ್ಟಿಲ್ಲ. ಆದ್ದರಿಂದ ನಾವು ಆ ಕಾಲೇಜಿನ ಮೇಲೆ ಯಾವ ಹತೋಟಿಯನ್ನು ಸಹ ಇಟ್ಟುಕೊಂಡಿಲ್ಲ ಈ ಸೀಟ್‌ಗಳ ಹೆಚ್ಚಿಕೆ ಕಾರ್ಯ ಈ ಸಲ ನಿಧಾನವಾಗಲು ಕಾರಣವೇನು ಎಂಬುದನ್ನು ಹೇಳಿದ್ದೇನೆ. ಮುಂದಿನ ವರ್ಷದಿಂದ ಜುಲೈ ತಿಂಗಳಿನಲ್ಲಿಯೇ ಆಯ್ಕೆ ಕೆಲಸವನ್ನು ಮುಗಿಸಿ ಆಗಸ್ಟ್ ತಿಂಗಳಿನಿಂದ ಸ್ನಾತಕೋತ್ತರ ವ್ಯಾಸಂಗ ಪ್ರಾರಂಭವಾಗುವಂತೆ ನಾವು ಸೂಕ್ತ ವ್ಯವಸ್ಥೆ ಮಾಡುತ್ತೇವೆ.

ಕಿತ್ತೂರು ರಾಣಿ ಚೆನ್ನಮ್ಮನ ಸಮಾಧಿಯನ್ನು ಸಂರಕ್ಷಿಸಲು ಮತ್ತು ದುರಸ್ತಿಯ ಬಗ್ಗೆ

೬೦೫. ಶ್ರೀ ಜಿ. ನಾರಾಯಣಸ್ವಾಮಿ.— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕಿತ್ತೂರು ರಾಣಿ ಚೆನ್ನಮ್ಮನ ಸಮಾಧಿಯನ್ನು ಸಂರಕ್ಷಿಸಲು ಮತ್ತು ದುರಸ್ತಿಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

(ಆ) ರಾಣಿ ಚೆನ್ನಮ್ಮನ ನೆನಪುಗೋಸ್ಕರ ಸಮಾಧಿ ಸ್ಥಳದಲ್ಲಿ ಹಾಗೂ ಅರಮನೆ ಗುರು ಮನೆಗಳನ್ನು ಉಳಿಸುವ ಬಗ್ಗೆ ಯೋಜನೆಗಳೇನಾದರೂ ಸರ್ಕಾರದವರಲ್ಲಿ ಇದೆಯೇ ?

(ಇ) ಹಾಗಿದ್ದರಲ್ಲಿ ಅದರ ಸಂಪೂರ್ಣ ರೂಪು ರೇಖೆಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

(ಅ) ಹೌದು

(ಆ) ಹೌದು

(ಇ) ಸುಮಾರು ಒಂದೂವರೆ ವರ್ಷಗಳಿಂದ ಕಿತ್ತೂರು ಇತಿಹಾಸಕ್ಕೆ ಸಂಬಂಧಪಟ್ಟ ಮುಖ್ಯ ಸ್ಥಳಗಳು ಅಂದರೆ ಕಿತ್ತೂರು ನಂದಗಡ, ರಾಯಪುರ, ದೇಸನೂರು, ಬೈಲಹೊಂಗಲ ಮತ್ತು ಕಾರಕಿಯಲ್ಲಿರುವ ಸ್ಮಾರಕಗಳನ್ನು ಪರಿಶೀಲಿಸಿ ಇವುಗಳ ರಕ್ಷಣೆಯ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಂಡಿದೆ. ಕಿತ್ತೂರಿನಲ್ಲಿಯ ಕೋಟೆ ಮತ್ತು ಅರಮನೆಯನ್ನು ಈಗಾಗಲೇ ಸಂರಕ್ಷಿಸಲಾಗಿದೆ. ಉಳಿದ ಸ್ಮಾರಕಗಳ ಸಂರಕ್ಷಣೆಯ ಬಗ್ಗೆ ಕ್ರಮಗಳು ವಿವಿಧ ಹಂತಗಳಲ್ಲಿದ್ದು, ಇವುಗಳನ್ನು ಸಂರಕ್ಷಿತ ಸ್ಮಾರಕಗಳೆಂದು ಘೋಷಿಸಿದ ಕೂಡಲೇ ಇವುಗಳ ಸಂರಕ್ಷಣೆ ಬಗೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಇದಲ್ಲದೆ ಸ್ವಾತಂತ್ರ್ಯ ಚಳುವಳಿಯ ಪ್ರಾರಂಭದ ಹಂತದ ಇತಿಹಾಸದಲ್ಲಿ ಕಿತ್ತೂರಿನ ಪಾತ್ರದ ಬಗ್ಗೆ ಹಾಗೂ ಈ ಸ್ಮಾರಕಗಳ ಕುರಿತು ಜನ ಸಾಮಾನ್ಯರಿಗೆ ತಿಳುವಳಿಕೆ ಕೊಡುವ ದೃಷ್ಟಿಯಿಂದ ಇಂದು ಕೈಪಿಡಿಯನ್ನು ಹೊರ ತರಲು ಉದ್ದೇಶಿಸಲಾಗಿದೆ ಈ ಕಾರ್ಯಗಳು ೧೯೮೮-೮೯ರ ಆರ್ಥಿಕ ವರ್ಷದೊಳಗಾಗಿ ಪೂರ್ಣಗೊಳ್ಳಬಹುದೆಂದು ನಿರೀಕ್ಷಿಸಲಾಗಿದೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಜನಸಾಮಾನ್ಯರಿಗೆ ತಿಳುವಳಿಕೆ ಕೊಡತಕ್ಕ ದೃಷ್ಟಿಯಿಂದ ಕೈಪಿಡಿ ತರುತ್ತೇವೆಂದು ಹೇಳಿದ್ದಾರೆ, ಇದು ಸ್ವಾಗತಾರ್ಹ ಆದರೂ ಸಹ ಕೆಲವು ಕ್ರಮಗಳನ್ನು ಕೈಗೊಂಡಿದ್ದಾರೆ. ನಾನು ಬೈಲಹೊಂಗಲಕ್ಕೆ ಹೋಗಿ ಕಿತ್ತೂರು ರಾಣಿ ಚೆನ್ನಮ್ಮನವರ ಸಮಾಧಿಯನ್ನು ನೋಡಿ ಬಂದಿದ್ದೇನೆ. ಅದು ಒಂದು ಹಳ್ಳಿಯಲ್ಲಿ ಎಂದರೆ ಗ್ರಾಮಾಂತರ ಪ್ರದೇಶದಲ್ಲಿ ಹುಲ್ಲಿನ ಬವಣೆ ಇರತಕ್ಕಂಥ ಹಿತ್ತಲಂ ಪ್ರದೇಶದಲ್ಲಿ ಕೊನೆಯುಮಟ್ಟದಲ್ಲಿದೆ. ಇದು ನಾನು ಬೈಲಹೊಂಗಲಕ್ಕೆ ಹೋಗಿ ಪ್ರತ್ಯಕ್ಷವಾಗಿ ಕಂಡಿರತಕ್ಕಂಥದ್ದು. ಇದನ್ನು ಒಂದು ಸ್ಮಾರಕವನ್ನಾಗಿ ಪರಿಗಣಿಸಬೇಕು ಕಿತ್ತೂರು ರಾಣಿ ಚೆನ್ನಮ್ಮನವರ ವಿಷಯವನ್ನು ಚರಿತ್ರೆಯಲ್ಲಿ ಓದಿದ್ದೇವೆ, ಚಿತ್ರಗಳಲ್ಲಿ ನೋಡಿದ್ದೇವೆ. ಆದರೆ ಬೈಲಹೊಂಗಲದಲ್ಲಿ ನಾನು ಕಂಡಂಥ ದೃಷ್ಯ ಬಹಳ ದಾರುಣಕರವಾದ ಸಂಗತಿ. ಈ ಬಗ್ಗೆ ಸರಿಯಾದಂಥ ಉತ್ತರವನ್ನು ಕೊಡಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಸಮರ್ಪಕವಾದ ಉತ್ತರವನ್ನು ಕೊಟ್ಟುಬಿಟ್ಟಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.—ಬೈಲಹೊಂಗಲದಲ್ಲಿ ಯಾವ ಕ್ರಮವನ್ನು ಈ ಬಗ್ಗೆ ಕೈಗೊಂಡಿಲ್ಲ. ಅವರ ಸಮಾಧಿಯನ್ನು ಸಂರಕ್ಷಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ನಾರಾಯಣಕುಮಾರ್‌ರವರ ಆಕ್ಷಿ ಇದರಲ್ಲಿ ಎಷ್ಟಿದೆ ಎನ್ನುವದು ನನಗೆ ಗೊತ್ತುಂಟು. ಕಿತ್ತೂರು ರಾಣಿ ಚೆನ್ನಮ್ಮನವರ ಅವಶೇಷ ಯಾವುದೇ ರೀತಿ ಇರಲಿ ಅದನ್ನು ಕಾಪಾಡತಕ್ಕಂಥ ಜವಾಬ್ದಾರಿ ಸರ್ಕಾರಕ್ಕಿದೆ. ನಾವು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ ಇದನ್ನು ಸಂರಕ್ಷಕ ಸ್ಮಾರಕವನ್ನಾಗಿ ಡಿಕ್ಲೇರ್ ಮಾಡಬೇಕು. ಇನ್ನೂ ಮಾಡಿಲ್ಲ, ಮಾಡಬಹುದು. ಕೆಲವು ತಿಂಗಳ ಹಿಂದೆ ನನಗೆ ಗೊತ್ತಾಯಿತು ಕಿತ್ತೂರು ರಾಣಿ ಚೆನ್ನಮ್ಮನವರಿಗೆ ಸೇರಿದಂಥ ಹಾಳಾದಂಥ ಮನೆ ಏನಿದೆ ಅದನ್ನು ಈಗ ಯಾರು ಕಾಗತ್ತಿಯಲ್ಲಿ ಉಪಯೋಗಿಸುತ್ತಾ ಇದ್ದಾರೋ ಅವರು ಅದನ್ನು ಮಾರಾಟ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ.ಎಂದು. ತಕ್ಷಣ ನಾನು ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ತಿಳಿಸಿ ಅದನ್ನು ನಿಲ್ಲಿಸಬೇಕು ಎಂದು ಹೇಳಿದ್ದೇನೆ. ಆಕಸ್ಮಾತ್ತಾಗಿ ಅವರಿಗೆ ಮಾರಾಟ ಮಾಡುವಂಥ ಇಚ್ಛೆ ಇದ್ದರೆ ಸರ್ಕಾರವೇ ಅದನ್ನು ಕೊಂಡುಕೊಳ್ಳಬೇಕು ಎಂದು ಹೇಳಿದ್ದೇನೆ. ಇದರ ಹೊರತಾಗಿ ಕೇಂದ್ರ ಸರ್ಕಾರಕ್ಕೆ ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆಯನ್ನು ದಿಲ್ಲಿಯಲ್ಲಿ ಸ್ಥಾಪನೆ ಮಾಡಬೇಕು, ಅದಕ್ಕೆ ಜಾಗ ಕೊಡಿ ಎಂದು ಕೇಳಿದ್ದೇನೆ. ಇದರ ಜೊತೆಗೆ ಟಿಪ್ಪು ಸುಲ್ತಾನರ ಪ್ರತಿಮೆಯನ್ನೂ ಸ್ಥಾಪನೆ ಮಾಡಬೇಕು. ನಮ್ಮ ಕರ್ನಾಟಕದ ಇತಿಹಾಸದಲ್ಲಿ ಈ ಇಬ್ಬರು ಮಹಾ ವ್ಯಕ್ತಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದಂಥ ವ್ಯಕ್ತಿಗಳು. ಆದುದರಿಂದ ಕಿತ್ತೂರು ರಾಣಿ ಚೆನ್ನಮ್ಮನವರ ಮತ್ತು ಟಿಪ್ಪು ಸುಲ್ತಾನರ ಪ್ರತಿಮೆಗಳು ದಿಲ್ಲಿಯಲ್ಲಿ ಇರಬೇಕಾದುದು ಸೂಕ್ತ ಎಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ.

ಶ್ರೀ ಜಿ. ನಾರಾಯಣಕುಮಾರ್.— ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆಯನ್ನು, ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಸ್ಥಾಪನೆ ಮಾಡುವ ವಿಚಾರವನ್ನು ಕೇಳಿ ಸಂತೋಷವಾಯಿತು. ಕರ್ನಾಟಕದ ರಾಜಧಾನಿ ಬೆಂಗಳೂರು ನಗರದ ವಿಧಾನ ಸೌಧದ ಮುಂದೆ ಒಂದು ಪ್ರತಿಮೆಯನ್ನು ಮಾಡಬೇಕೆಂದು ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ವಿಧಾನ ಸೌಧದ ಮುಂದೆ ಯಾರ ಯಾರ ಪ್ರತಿಮೆ ಹಾಕಬೇಕಾಗಿತ್ತದೋ ಗೊತ್ತಿಲ್ಲ. ಆದರೆ, ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆಯನ್ನು ಬೆಳಗಾಂ ನಗರದಲ್ಲಿ ಅತಿ ಸುಂದರವಾಗಿ ಅಲ್ಲಿನ ಸ್ಥಾನೀಕ ಸಂಸ್ಥೆಯವರು ಮತ್ತು ಜಿಲ್ಲೆಯವರು ಸ್ಥಾಪನೆ ಮಾಡಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ನಾರಾಯಣಕುಮಾರ್‌ರವರ ಪ್ರತಿಮೆಯನ್ನು ವಿಧಾನ ಸೌಧದ ವಂಂದೆ ಹಾಕಿಸಿ.

ಶ್ರೀ ರಾಮಕೃಷ್ಣ ಹೆಗಡೆ.—ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ಮಹಿಳೆಯ ಪ್ರತಿಮೆಯನ್ನು ದೇಶದ ರಾಜಧಾನಿಯಲ್ಲಿ ಸ್ಥಾಪನೆ ಮಾಡುವುದು ಸೂಕ್ತ. ಅದಕ್ಕೆ ಬೇಕಾದಂಥ ಖರ್ಚನ್ನು ಕೂಡ ನಾವೇ ನೋಡಿಕೊಳ್ಳುತ್ತೇವೆಂದು ಹೇಳಿದ್ದೇವೆ. ಯೋಗ್ಯವಾದಂಥ ಸ್ಥಳವನ್ನು ಈ ಎರಡು ಪ್ರತಿಮೆಗಳನ್ನು ಸ್ಥಾಪನೆ ಮಾಡುವುದಕ್ಕೆ ಕೊಡಬೇಕೆಂದು ಕೇಳಿಕೊಂಡಿದ್ದೇವೆ.

ರಾಜ್ಯದಲ್ಲಿ ಆಸ್ಪತ್ರೆ ಕಟ್ಟಡಗಳ ನಿರ್ಮಾಣ ಹಾಗೂ ದುರಸ್ತಿ

೬೯೨. ಶ್ರೀಮತಿ ಸುಮಾ ವಸಂತ್ (ವಿರಾಜ ಪೇಟೆ).— ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೪–೮೫, ೧೯೮೫–೮೬, ೧೯೮೬–೮೭ ರಲ್ಲಿ ರಾಜ್ಯದಲ್ಲಿರುವ ಆಸ್ಪತ್ರೆ ಕಟ್ಟಡಗಳ ದುರಸ್ತಿ ಹಾಗೂ ಹೊಸ ಕಟ್ಟಡಗಳು ಮಂತ್ರಿ, ನೌಕರ ವರ್ಗದವರ ವಾಸದ ಕಟ್ಟಡಗಳ ದುರಸ್ತಿಗಾಗಿ ಮಂಜೂರಾದ ಹಣ ಎಷ್ಟು?

ಆ) ಕೊಡಗು ಜಿಲ್ಲೆಗೆ ಈ ಸಾಲಿನಲ್ಲಿ ದುರಸ್ತಿ ಹಾಗೂ ಹೊಸ ಕಟ್ಟಡಗಳಿಗಾಗಿ ಬಿಡುಗಡೆ ಮಾಡಿದ ಹಣ ಎಷ್ಟು (ತಾಲ್ಲೂಕುವಾರು ಮಾಹಿತಿ ಬೇಕು)

ಇ) ಇದರಲ್ಲಿ ಆಸ್ಪತ್ರೆ ಕಟ್ಟಡಗಳ ಬಗ್ಗೆ ಹಾಗೂ ವಾಸದ ಕಟ್ಟಡಗಳ ಬಗ್ಗೆ ಮಾಡಿದ ಖರ್ಚೆಷ್ಟು?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು). —

ಲಕ್ಷ ರೂ.ಗಳಲ್ಲಿ

	೧೯೮೪–೮೫	೧೯೮೫–೮೬	೧೯೮೬–೮೭
ಆಸ್ಪತ್ರೆಗಳ ಹೊಸ ಕಟ್ಟಡ	೬೨೫.೯೪	೫೮೪.೪೫	೨೯೬.೫೬
ನೌಕರ ವರ್ಗದ ವಾಸದ ಕಟ್ಟಡ	೨೮.೭೦	೩೧.೫೪	೮೮೦.೭೦
ಕಟ್ಟಡಗಳ ದುರಸ್ತಿ	೩೭೭.೦೦	೩೨೪.೦೨	೪೮೨.೪೪

ಆಯಾಮ್ಯಯ ಪಟ್ಟಿಯಲ್ಲಿ ಒದಗಿಸಿರುವ ಮೊತ್ತ

ಮಡಿಕೇರಿ ತಾಲ್ಲೂಕು		ಸೋಮವಾರ ಪೇಟೆ ತಾಲ್ಲೂಕು		ವಿರಾಜಪೇಟೆ ತಾಲ್ಲೂಕು	
ಹೊಸ ಕಟ್ಟಡಕ್ಕಾಗಿ	ದುರಸ್ತಿಗಾಗಿ	ಹೊಸ ಕಟ್ಟಡಕ್ಕಾಗಿ	ದುರಸ್ತಿಗಾಗಿ	ಹೊಸ ಕಟ್ಟಡಕ್ಕಾಗಿ	ದುರಸ್ತಿಗಾಗಿ
೧೪.೬೭ ಆಸ್ಪತ್ರೆ	೫.೬೨ ವಸತಿಗೃಹ	೧೪.೭೯ ಆಸ್ಪತ್ರೆ	೩.೦೮ ವಸತಿಗೃಹ	೧೨.೫೬ ಆಸ್ಪತ್ರೆ	೩. ೪ ವಸತಿಗೃಹ
೪.೦೭	೦.೨೦	೫.೭೦	೦.೬೨	೪.೦೫	೦.೭೧